ಮುಖ್ಯಮಂತ್ರಿಗಳು ಈ ಸದನದಲ್ಲಿ ಇದ್ದಾಗ ಮಾತನಾಡಿದರೆ ಏನು ಮಾಡಬೇಕು ಎನ್ನತಕ್ಕದ್ದು, ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕದ್ದು ಆಗುತ್ತದೆ. ಅವರು ಬಂದಮೇಲೆ ಶುರುಮಾಡಿದರೆ ಉತ್ತಮವೆಂದು ನನಗೆ ಅನ್ನಿಸುತ್ತದೆ. ನಾವು ಅದರ ಬಗ್ಗೆ ಮಾತನಾಡಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಾನು ಶೂನ್ಯ ವೇಳೆಯಲ್ಲಿ ಮತ್ತೊಂದು ರಾಜ್ಯಕ್ಕೆ ಸಂಬಂಧಪಟ್ಟಿರತಕ್ಕಂಥ ಮಹತ್ವದ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ನಿಮ್ಮ ಅನುಮತಿಯನ್ನು ಕೋರಿದ್ದೆ.

ಅಧ್ಯಕ್ಷರು:- ನಾನು ಕೊಡುತ್ತೇವೆ, ಇದನ್ನು ಮುಗಿಸಿದ ನಂತರ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಬದನವಾಳು ಗ್ರಾಮದ ಘಟನೆಯ ಬಗ್ಗೆ ಮುಖ್ಯಮಂತ್ರಿಗಳು ಬರಬೇಕೆಂದು ಸರ್ಕಾರದವರು ಬಯಸಿರುವುದರಿಂದ ಅದರ ಬಗ್ಗೆ ಆಮೇಲೆ ಚರ್ಚೆ ಮಾಡೋಣ. ಈಗ ಸರ್ಕಾರದ ವಕ್ತಾರರು ಇದ್ದಾರೆ, ಉಪಮುಖ್ಯಮಂತ್ರಿಗಳು ಇದ್ದಾರೆ. ಕೊಂಕಣ ರೈಲ್ವೆಯ ಕೆಲಸ ಬಗ್ಗೆ, ಪ್ರಸ್ತಾಪ ಮಾಡಿ ಮುಗಿಸೋಣ. ಬೇಕಾದರೆ ಮುಖ್ಯಮಂತ್ರಿಗಳು ಬಂದಾಗ ಅದನ್ನು ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಮತ್ತು ಮಾನ್ಯ ಸಿಂಧ್ಯರವರು ತಮ್ಮ ಕೊಠಡಿಗೆ ಬಂದು ಕೊಂಕಣ ರೈಲ್ವೆಯ ಕೆಲಸ ಏನು ನಿಂತಿದೆ ಇದರ ಬಗ್ಗೆ ಪ್ರಸ್ತಾಪ ಮಾಡಬೇಕು ಅದಕ್ಕೆ ತಾವು ಅನುಮತಿಯನ್ನು ಕೊಡುವುದಕ್ಕೆ ತಾವು ಒಪ್ಪಿಕೊಂಡಿದ್ದೀರಿ, ಇದರ ಬಗ್ಗೆ ಚರ್ಚೆಗೆ ಆಮೇಲೆ ಅವಕಾಶ ಕೊಡುತ್ತೇವೆಂದು ಹೇಳಿದ್ದೀರಿ ಪರವಾಗಿಲ್ಲ.

ಅಧ್ಯಕ್ಷರು:- ನಾಲ್ಕು ಗಮನ ಸೆಳೆಯುವ ಸೂಚನೆ ಇವೆ, ಅವುಗಳನ್ನು ಮುಗಿಸಿದ ನಂತರ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್:- ಕೊಂಕಣದ್ದು ಇದೆ, ಮಂಡ್ಯ ಮತ್ತು ಅನೇಕ ಕಡೆ ಕಾಲರಾ ಬಂದಿರುವ ಬಗ್ಗೆ ತಮಗೆ ಹೇಳಿದ್ದೇವೆ..

ಶ್ರೀ ಕರಿಯಣ್ಣ:- ತಾವು ಮತ್ತೆ ಬೇರೆ ಚರ್ಚೆಯನ್ನು ಎತ್ತಿಕೊಂಡಾಗ ಆ ಚರ್ಚೆ ಪೂರ್ತಿಯಾಗುವ ತನಕ ಈ ಚರ್ಚೆಗೆ ಬರುವುದಿಲ್ಲ ಅಂದರೆ ಈ ವಿಚಾರ ಅಲ್ಲಿಗೆ ನಿಂತು ಬಿಡುತ್ತದೆ. ಇದು ಬಹಳ ಪ್ರಾಮುಖ್ಯವಾದಂತಹ ವಿಚಾರವಾಗಿದೆ. ಯಾವುದೇ ಚರ್ಚೆ ಇದ್ದರೂ ಮಾನ್ಯ ಮುಖ್ಯಮಂತ್ರಿಗಳು ಬಂದತಕ್ಷಣ ಅದನ್ನು ಅಲ್ಲಿಗೆ ಮೊಟಕುಗೊಳಿಸಿ ಇದನ್ನು ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಗಮನ ಸೆಳೆಯುವ ಸೂಚನೆಗಳು

ವಿಷಯ:- ತಾಳೆಎಣ್ಣೆ ಉತ್ಪಾದಿಸುವ ಘಟಕವನ್ನು ಪ್ರಾರಂಭಿಸುವಲ್ಲಿ ತಡವಾಗುತ್ತಿರುವುದರಿಂದ ರೈತರಿಗೆ ಆಗುತ್ತಿರುವ ತೊಂದರೆ

ಶ್ರೀ ಎಂ.ಎಸ್. ಆತ್ಮಾನಂದ:- ತಾಳೆಎಣ್ಣೆ ಉತ್ಪಾದನಾ ಘಟಕವನ್ನು ಪ್ರಾರಂಭಿಸುವಲ್ಲಿ ವಿಳಂಬವಾಗಿರುವ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀಮತಿ ನಾಗಮ್ಮ ಕೇಶವಮೂರ್ತಿ:- ಮಾನ್ಯ ಅಧ್ಯಕ್ಷರೇ, ಪಾಮೆಣ್ಣೆ ಪ್ರದರ್ಶನ ಯೋಜನೆಯನ್ನು ಭಾರತ ಸರ್ಕಾರದ ಬಯೋ ಟೆಕ್ನಾಲಜಿ ಇಲಾಖೆ ಮತ್ತು ಕರ್ನಾಟಕ ಸರ್ಕಾರದ ತೋಟಗಾರಿಕೆ ಇಲಾಖೆಯ ಅಡಿಯಲ್ಲಿ ಕೈಗೊಳ್ಳಲಾಗಿದೆ. ಈ ಯೋಜನೆಯ ಪ್ರಕಾರ ಶಿವಮೊಗ್ಗ ಜಿಲ್ಲೆಯ ಈ ಕೆಳಕಂಡ ತಾಲ್ಲೂಕುಗಳಲ್ಲಿ ಅಂದರೆ, ಶಿವಮೊಗ್ಗ, ಭದ್ರಾವತಿ, ಹೊಸ್ನಾಳಿ ಮತ್ತು ಚನ್ನಗಿರಿ ತಾಲ್ಲೂಕುಗಳಲ್ಲಿ 1100 ಹೆಕ್ಟೇರ್ ಪ್ರದೇಶದಲ್ಲಿ ತಾಳೆ ಗಿಡಗಳನ್ನು ಬೆಳೆಸಲಾಗುತ್ತಿದೆ. ಪ್ರಥಮ ಕಂತಿನ ತಾಳೆ ಹಣ್ಣುಗಳು ಜೂನ್ 93ರ ಹೊತ್ತಿಗೆ

ಕುಯ್ಲಿಗೆ ಬರುವ ನಿರೀಕ್ಷೆ ಇದೆ. ಈ ಹಣ್ಣುಗಳ ಸಂಸ್ಕರಣ ಘಟಕವನ್ನು ನೇರವಾಗಿ ಸರ್ಕಾರದ ಅಡಿಯಲ್ಲಿ ಅಥವಾ ಸಹಕಾರ ಸಂಸ್ಥೆಯ ಅಡಿಯಲ್ಲಿ ಕೈಗೊಳ್ಳಲು ಯೋಜಿಸಲಾಗಿತ್ತು. ಆದರೆ ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮಕ್ಕೆ ಜಂಟಿ ವಲಯದಲ್ಲಿ ಈ ಯೋಜನೆಯನ್ನು ಸ್ಥಾಪಿಸಲು ಸೂಚಿಸಿತ್ತು. ಕೆ.ಎಸ್.ಐ.ಐ.ಡಿ.ಸಿ. ಸಂಸ್ಥೆ ಓಸ್ವಾಲ್ ಗುಂಪಿಗೆ ಸೇರಿದ ಮೆ: ಓಸ್ವಾಲ್ ಪಾಮ್ ಇಂಡಿಯಾ ಲಿಮಿಟೆಡ್ ಸಂಸ್ಥೆಯೊಡನೆ ಜಂಟಿ ವಲಯದಲ್ಲಿ ಉದ್ಯಮವನ್ನು ಸ್ಥಾಪಿಸಲು ಯೋಜಿಸಿತ್ತು. ಓಸ್ವಾಲ್ ಗುಂಪು ಈಗಾಗಲೇ ಎಣ್ಣೆ : ವನಸ್ಪತಿ ಅಂಥ ವಸ್ತುಗಳ ಉತ್ಪಾದನೆಯಲ್ಲಿ ಪರಿಣತಿ ಹೊಂದಿರುವುದರಿಂದ ಇವರನ್ನು ಆರಿಸಿಕೊಳ್ಳಲಾಯಿತು.

ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮವು ಓಸ್ವಾಲ್ ಪಾಮ್ ಇಂಡಿಯಾ ಲಿಮಿಟೆಡ್ ಸಂಸ್ಥೆಯೊಡನೆ ದಿನಾಂಕ 4-4-1991ರಂದು ಜಂಟಿ ವಲಯದಲ್ಲಿ ತಾಳೆ ಎಣ್ಣೆಯನ್ನು ಉತ್ಪಾದಿಸುವ ಘಟಕವೊಂದನ್ನು ಶಿವಮೊಗ್ಗ ಜಿಲ್ಲೆಯಲ್ಲಿ ಸ್ಥಾಪಿಸಲು ಒಪ್ಪಂದ ಒಂದನ್ನು ಮಾಡಿಕೊಂಡಿತು. ಈ ಒಪ್ಪಂದದ ಪ್ರಕಾರ ಕೆ.ಎಸ್.ಐ.ಐ.ಡಿ.ಸಿ. ಶೇಕಡ 26 ಬಂಡವಾಳ ಹೂಡಿರುವುದೆಂದು ಓಸ್ವಾಲ್ ಗುಂಪು ಶೇಕಡ 25ರಷ್ಟು ಬಂಡವಾಳ ಹೂಡುವುದೆಂದೂ ಮತ್ತು ಉಳಿದ ಶೇಕಡ 49 ಬಂಡವಾಳವನ್ನು ಸಾರ್ವಜನಿಕರಿಂದ ಎತ್ತಲು ನಿರ್ಧರಿಸಲಾಯಿತು. 26-12-91ರಂದು ಜಂಟಿ ವಲಯದ ಉದ್ಯಮವನ್ನು ''ಕರ್ನಾಟಕ ಓಸ್ವಾಲ್ ಪಾಮ್ ಲಿಮಿಟೆಡ್'' ಎಂಬ ಹೆಸರಿನಲ್ಲಿ ಸ್ಥಾಪಿಸಲಾಯಿತು. ಈ ಯೋಜನೆಯ ಅಂದಾಜು ವೆಚ್ಚ ರೂ. 925 ಲಕ್ಷ. ಒಪ್ಪಂದದ ಪ್ರಕಾರ ಕೆಎಸ್ಐಐಡಿಸಿ ಸಂಸ್ಥೆ ರೂ. 104 ಲಕ್ಷಗಳನ್ನು ಮತ್ತು ಓಸ್ವಾಲ್ ಗುಂಪು ರೂ. 100 ಲಕ್ಷ ಹೂಡಲು ಯೋಜಿಸಿದೆ. ಓಸ್ವಾಲ್ ಗುಂಪು ಈಗಾಗಲೇ ರೂ. 100ಲಕ್ಷಕ್ಕೂ ಹೆಚ್ಚು ಹಣವನ್ನು ಹೂಡಿದೆ. ಮಲೇಶಿಯಾ, ಸಿಂಗಪೂರ್ ಮತ್ತು ಆಸ್ಟ್ರೇಲಿಯಾಗಳಿಂದ ತರಬೇಕಾದ ಯಂತ್ರೋಪಕರಣಗಳನ್ನು ತರಿಸಲು ರೂ. 50 ಲಕ್ಷದ ಲೆಟರ್ ಆಫ್ ಕ್ರೆಡಿಟ್ ದೊರಕಿಸಲು ಒಪ್ಪಿಕೊಂಡಿದೆ. ಕಂಪನಿಯು ಹಣಕಾಸು ಸಂಸ್ಥೆಗಳು ಮತ್ತು ವಾಣಿಜ್ಯ ಬ್ಯಾಂಕ್‌ಗಳಿಂದ ಹಣ ಎತ್ತಲು ಮತ್ತು ಸಾರ್ವಜನಿಕರಿಂದ ಬಂಡವಾಳ ಶೇಖರಿಸಲು ಕ್ರಮ ಕೈಗೊಂಡಿದೆ. ಯೋಜನೆಗೆ ಕರ್ನಾಟಕ ಸರ್ಕಾರವು ಕಾರೇಹಳ್ಳಿ ಪ್ರದೇಶದಲ್ಲಿ ಒದಗಿಸಿರುವ 50 ಎಕರೆ ಪ್ರದೇಶವನ್ನು ಕೆಎಸ್ಐಐಡಿಸಿ ತನ್ನ ವಶಕ್ಕೆ ತೆಗೆದುಕೊಂಡಿದೆ. ಕಟ್ಟಡಗಳು ಮತ್ತು ಸಿವಿಲ್ ಕಾಮಗಾರಿಗಳು ಪ್ರಗತಿಯಲ್ಲಿವೆ. ಮತ್ತು ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳಿಗೆ ಮತ್ತು ಆಮದು ಮಾಡಬೇಕಾದ ಉಪಕರಣಗಳಿಗೆ ಒಪ್ಪಂದ ಒಂದನ್ನು ಮಾಡಿಕೊಳ್ಳಲಾಗಿದೆ. ಕಂಪನಿಯು 50 ಕೆ.ವಿ.ಎ. ವಿದ್ಯುಚ್ಛಕ್ತಿಯನ್ನು ತಾತ್ಕಾಲಿಕವಾಗಿ ಪಡೆದಿದೆ ಮತ್ತು ಯೋಜನೆಗೆ ಬೇಕಾದ 400 ಕೆ.ವಿ.ಎ.ಯ ಕಾಯಂ ವಿದ್ಯುಚ್ಛಕ್ತಿಯನ್ನು ಪಡೆಯಲು ಸೆಕ್ಯುರಿಟಿ ಡಿಫಾಸಿಟ್ ತುಂಬಿದೆ.

ಮೊದಲು ಯೋಜಿಸಿದಂತೆ ಯೋಜನೆಯು ಜೂನ್ 93ರಲ್ಲಿ ಪೂರ್ಣಗೊಳ್ಳುವ ಸಂಭವವಿದೆ. ಇದೇ ಸಮಯಕ್ಕೆ ಸರಿಯಾಗಿ ಪ್ರಥಮ ಕಂತು ತಾಳೆ ಹಣ್ಣುಗಳ ಕುಯಿಲನ್ನು ನಿರೀಕ್ಷಿಸಲಾಗಿದೆ.

ಕಂಪನಿಯು ಹಣ್ಣುಗಳ ಕುಯಿಲು ಆದಂತೆ ಪರ್ಯಾಯ ಮಾರ್ಗಗಳಿಂದ ಸಂಸ್ಕರಿಸಲು ವ್ಯವಸ್ಥೆ ಮಾಡುವುದು. ಹಣ್ಣುಗಳ ಕುಯಿಲಿನ ಸಮಯಕ್ಕೆ ಸರಿಯಾಗಿ ಅವುಗಳ ಸಂಸ್ಕರಣಕ್ಕಾಗಿ ಬೇಕಾದ ಪ್ರಮುಖ ಉಪಕರಣಗಳ ಸ್ಥಾಪನೆ ಪೂರ್ಣಗೊಳ್ಳುವುದೆಂದು ನಿರೀಕ್ಷಿಸಲಾಗಿದೆ.

ಹಣ್ಣುಗಳು ಕುಯಿಲಿಗಾಗಿ ಸಿದ್ಧವಾಗಿದ್ದಂತೆ ಅವುಗಳನ್ನು ರೈತರಿಂದ ಪಡೆಯಲು ಕಂಪನಿಯು ಯೋಜಿಸಿದೆ. ಈ ವ್ಯವಸ್ಥೆಯಿಂದ ರೈತರಿಂದ ಕಂಪನಿಯು ತಾಳೆ ಹಣ್ಣುಗಳನ್ನು ಸ್ವೀಕರಿಸದಿರುವ ಪ್ರಶ್ನೆಯಾಗಲೀ, ಬೆಳೆ ಹಾಳಾಗುವ ಪ್ರಶ್ನೆಯಾಗಲೀ ಅಥವಾ ಅವರಿಗೆ ನಷ್ಟ ಸಂಭವಿಸುವ ಪ್ರಶ್ನೆಯಾಗಲೀ ಉದ್ಭವಿಸುವುದಿಲ್ಲ.

ಶ್ರೀ ಎಂ.ಎಸ್. ಆತ್ಮಾನಂದ:- ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತೇವೆ ಮತ್ತು ಕ್ರೆಡಿಟ್ ಅನ್ನು ನಿರೀಕ್ಷಿಸಲಾಗಿದೆ ಎಂದು ಹೇಳಿರುವುದು ಒಂದು ತರಹದ

ಜಿಜ್ಞಾಸೆಯ ಉತ್ತರವಾಗಿದೆ. ನಮ್ಮ ಕರ್ನಾಟಕ ರಾಜ್ಯ ರಾಷ್ಟ್ರದಲ್ಲಿ ತಾಳೆ ಬೆಳೆಯನ್ನು ಬೆಳೆಯುವುದಕ್ಕೆ ಪ್ರಶಸ್ತವಾಗಿದ್ದು ಸುಮಾರು 2 ಲಕ್ಷ ಹೆಕ್ಟೇರ್‌ಗಳಷ್ಟು ಹೆಚ್ಚಿನ ಪ್ರದೇಶ ಈ ವ್ಯಾಪ್ತಿಗೆ ಬರುತ್ತದೆಂದು ಗುರ್ತಿಸಿ ಶಿವಮೊಗ್ಗದಲ್ಲಿ ಪೈಲಟ್ ಪಾಜೆಕ್ಟ್‌ನ್ನು ಪ್ರಾರಂಭಿಸಲು ಸುಮಾರು 1000 ಹೆಕ್ಟೇರ್‌ನ್ನು ತೆಗೆದುಕೊಳ್ಳಲಾಗಿದೆ ಎಂದು ಉತ್ತರದಲ್ಲಿ ತಿಳಿಸಿರುತ್ತಾರೆ. 1993 ಜೂನ್‌ನಲ್ಲಿ, ತಾಳೆ ಕೊಯ್ಯಲಿಗೆ ಬರುತ್ತಿರತಕ್ಕಂಥ ಸಂದರ್ಭದಲ್ಲಿ ಇದರ ಪರಿಣಾಮ ಇತರ ರೈತರ ಮೇಲೆ ಆಗುವುದರಿಂದ First impression is the best impression ಎಂದು ಹೇಳುವಂತಹ ಒಂದು ಯುಕ್ತಿಯಂತೆ ಈ ತಾಳೆಎಣ್ಣೆ ಘಟಕ ಪ್ರಾರಂಭವಾಗದಿದ್ದರೆ ರೈತರಿಗೆ ಬಹಳ ನಷ್ಟವಾಗುತ್ತದೆ. ಇದು ಇನ್ನೂ ಪ್ರಾಸ್ತಾವಿಕ ಹಂತದಲ್ಲಿ ಇರುವ ಹಾಗೆ ಕಾಣಿಸುತ್ತದೆ. ಖಚಿತವಾಗಿ 1993ರ ಜೂನ್‌ನಲ್ಲಿ ಈ ಒಂದು ಘಟಕ ಪ್ರಾರಂಭವಾಗುತ್ತದೆಯೇ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಒಂದು ಪಕ್ಷ ಇದು ಪ್ರಾರಂಭವಾಗದೇ ಇದ್ದಲ್ಲಿ ರೈತರು ಬೆಳೆದ ತಾಳೆಬೆಳೆಗಳನ್ನು, ಹಣ್ಣನ್ನು ತೆಗೆದುಕೊಳ್ಳುವುದಕ್ಕೆ ಏನು ಏರ್ಪಾಡು ಮಾಡುತ್ತೀರಿ? ಒಂದು ಪಕ್ಷ ನಷ್ಟವಾದರೆ, ಈ ಕಂಪನಿ ನಷ್ಟವನ್ನು ತುಂಬಿಕೊಡುತ್ತಿದೆಯೇ? ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ:- ಮಾನ್ಯ ಅಧ್ಯಕ್ಷರೇ, ಭದ್ರಾ ಬೇಸಿನ್ ಎಕ್ಸ್‌ಪರೀಮೆಂಟಲ್ ಪ್ರಾಜೆಕ್ಟ್ ಎಂದು ಪ್ರಾರಂಭ ಮಾಡಿ 1100 ಎಕರೆ ಜಮೀನಿನಲ್ಲಿ ತಾಳೆ ಮರಗಳನ್ನು ಈಗಾಗಲೇ ಬೆಳೆಸಿದೆ; ಮತ್ತು ತಾಳೆ ಎಣ್ಣೆ ಸಂಸ್ಕರಣದ ಘಟಕದ ಸಿವಿಲ್ ವರ್ಕ್ ಮಾಡಿ ಆಗಿದೆ. ಇತರೇ ಕೆಲಸಗಳೂ ಸಹ ಈಗಾಗಲೇ ಪ್ರಾರಂಭವಾಗಿವೆ. ಫಾರಿನ್‌ನಿಂದ ಏನು ಮೆಷಿನರಿ ಬರಬೇಕು ಆ ಮೆಷಿನರಿಗಳು ಏಪ್ರಿಲ್ ಕೊನೆಯ ವೇಳೆಗೆ ಬರುವ ನಿರೀಕ್ಷೆ ನಮಗಿದೆ. ನಮ್ಮ ದೇಶದಲ್ಲೇ ಸಿಗುವಂತಹ ಮೆಷಿನರಿಗಳು ಬಂದು ಆಗಲೇ ಫ್ಯಾಬ್ರಿಕೇಷನ್ ಆಗಿದೆ ಮತ್ತು ಎಲೆಕ್ಟ್ರಿಸಿಟಿ ಸ್ಯಾಂಕ್ಷನ್ ಆಗಿದೆ. ಅದಕ್ಕೆ 5.4 ಲಕ್ಷ ರೂಪಾಯಿಗಳು ಡಿಪಾಸಿಟ್ ಮಾಡಿದ್ದಾರೆ. ಈ ಜೂನ್ ಕೊನೆಯ ವೇಳೆಗೆ ಹಾರ್‌ವೆಸ್ಟ್ ಬರುತ್ತದೆ ಹಣ್ಣುಗಳು ಫಲಕ್ಕೆ ಬರುತ್ತವೆ ಎನ್ನುವುದನ್ನು ತಾವೇ ತಿಳಿಸಿದ್ದೀರಿ. ನಾವು ಓಸ್ವಾಲ್ ಕಂಪನಿಯವರ ಹತ್ತಿರ ಸಹ ಚರ್ಚೆ ಮಾಡಿದ್ದೇವೆ. ಅವರು ರೈತರಿಗೆ ಯಾವ ರೀತಿಯಲ್ಲೂ ತೊಂದರೆಯಾಗದಂತೆ ಹಣ್ಣುಗಳು ಯಾವಾಗ ಮಾರುಕಟ್ಟೆಗೆ ಕೊಡುತ್ತಾರೆ ಆಗ ಅದನ್ನು ಬೈ ಮಾಡುತ್ತೇವೆ ಎಂದು ಆಶ್ವಾಸನೆಯನ್ನು ಸಹ ಅವರು ಕೊಟ್ಟಿದ್ದಾರೆ. ಅಕಸ್ಮಾತ್ ಏನಾದರೂ ಈ ಘಟಕ ಪ್ರಾರಂಭವಾಗುವುದಕ್ಕೆ 15-20 ದಿವಸಗಳು ತಡವಾದರೂ ಸಹ ನಾವು ಇಂಡಿಜಿನಸ್ ಇಂಜಿನಿಯಸ್ ಮೆಥಡ್‌ನಲ್ಲಿ ಈ ಆಯಿಲ್ ಎಕ್ಟ್ರಾಕ್ಷನ್ ಮಾಡಿ ನಾವು ರೈತರಿಗೆ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆದ್ದರಿಂದ ರೈತರಿಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ.

2. ಭದ್ರಾವತಿ ಕಾಗದ ಕಾರ್ಖಾನೆಯಲ್ಲಿ ಬಿಸಾಡುತ್ತಿದ್ದ ಸುಣ್ಣದ ಪುಡಿಯನ್ನು ಜಿಪ್ಸಮ್ ಎಂದು ಮೋಸದ ರೀತಿ ವ್ಯಾಪಾರ ಮಾಡುತ್ತಿರುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆಯ ಶ್ರೇಷ್ಠ ಕೈಗಾರಿಕೆಯಾದಂತಹ ಭದ್ರಾವತಿ ಕಾಗದ ಕಾರ್ಖಾನೆಯಲ್ಲಿ ಬಳಸಿ ಬಿಸಾಡುತ್ತಿದ್ದ ಸುಣ್ಣದ ಪುಡಿಯನ್ನು ಖಾಸಗಿಯವರಿಗೆ ಗುತ್ತಿಗೆಗೆ ಕೊಟ್ಟು ಅದನ್ನು ಉತ್ತಮ ಚೀಲಗಳಲ್ಲಿ ತುಂಬಿ ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಅದನ್ನು ಜಿಪ್ಸಮ್ ಎಂದು ಮೋಸ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆಯೇ. ಅಲ್ಲಿಯ ಪ್ರಗತಿಪರ ರೈತರಾದಂತಹ ಶ್ರೀ ಪ್ರಪುಲ್ ಚಂದ್ರರವರು ನಮಗೆ ಪತ್ರ ಬರೆದು ಇಡೀ ರಾಜ್ಯದ ರೈತರಿಗೆ ಯಾರೋ ಕೋಟ್ಯಾಧಿಪತಿಗಳಾಗುವುದಕ್ಕೋಸ್ಕರ ಈ ಕುತಂತ್ರ ನಡೆಯುತ್ತಿದೆ. ಇದರ ಬಗ್ಗೆ ವಿಶೇಷವಾದಂತಹ ಗಮನ ಕೊಡಬೇಕೆಂದು ಹೇಳಿ ಅವರು ಪತ್ರ ಬರೆದಿದ್ದರು. ಅದಕ್ಕಾಗಿ ಗಮನ ಸೆಳೆಯುವ ಸೂಚನೆಯ ಮೂಲಕ ಸರ್ಕಾರವನ್ನು ಕೇಳುತ್ತಿದ್ದೇನೆ. ದಯಮಾಡಿ, ಇದರಲ್ಲಿ ಏನು ನಡೆದಿದೆ, ಗುತ್ತಿಗೆಗೆ ಕೊಟ್ಟಿರುವುದು ನಿಜವೇ? ಅದು ಜಿಪ್ಸಮ್ ಎಂದು ಹೇಳಿ ರೈತರಿಗೆ ಮೋಸ ಮಾಡಿರುವುದು ನಿಜವೇ? ಇದರ ಬಗ್ಗೆ ಸಂಬಂಧಪಟ್ಟ ಸಚಿವರು ಉತ್ತರ ಕೊಟ್ಟರೆ ನಂತರ ನಾವು ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಅನುಕೂಲವಾಗುತ್ತದೆ.